# ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ

**ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ಕಟ್ಟಡ,**
**ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,**
**ಬಸವನಗುಡಿ, ಬೆಂಗಳೂರು-560004**

**ವಿಷಯ:** ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿ/ಪದಾಧಿಕಾರಿಗಳ ಚುನಾವಣೆ ನಡೆಸಲು ನಿರ್ದೇಶನಗಳು ಹಾಗೂ ಮಾರ್ಗಸೂಚಿಗಳು.

**ಉಲ್ಲೇಖ:** 1. ಸಂಖ್ಯೆ:ಸಚುಅ/ಅಸೂ.1/2013 ದಿನಾಂಕ 18.4.2013
2. ಸಂಖ್ಯೆ:ಸಚುಅ/ಅಸೂ.2/2013 ದಿನಾಂಕ 22.04.2013
3. ಸಂಖ್ಯೆ:ಸಚುಅ/ಅಸೂ.3/2013 ದಿನಾಂಕ 26.4.2013
4. ಸಂಖ್ಯೆ:ಸಚುಅ/ಅಸೂ.4/2013 ದಿನಾಂಕ 03.5.2013

***

**ಪ್ರಸ್ತಾವನೆ:**

ಸಂವಿಧಾನ(ತೊಂಬತ್ತೇಳನೇ ತಿದ್ದುಪಡಿ)ಅಧಿನಿಯಮ 2011ರ ಪ್ರಕಾರ ಸಂವಿಧಾನದ ಅನುಚ್ಛೇದ 19 ಖಂಡ (1) ಉಪಖಂಡ (ಸಿ)ನ್ನು ತಿದ್ದುಪಡಿ ಮಾಡಿ ಸಹಕಾರ ಸಂಘಗಳನ್ನು ಸ್ಥಾಪಿಸುವುದು ಒಂದು ಮೂಲಭೂತ ಹಕ್ಕು ಎಂದು, ಸಂವಿಧಾನದ ಭಾಗ-4ರಲ್ಲಿ ಅನುಚ್ಛೇದ 43ಬಿ ನ್ನು ಸೇರಿಸಿ ಸ್ವಯಿಚ್ಛೆ ರಚನೆ, ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವೃತ್ತಿಪರ ವ್ಯವಸ್ಥಾಪನೆ ತತ್ವಗಳ ಆಧಾರದ ಮೇಲೆ ಸಹಕಾರ ಸಂಘಗಳನ್ನು ಪ್ರೋತ್ಸಾಹಿಸಲು ಪ್ರಯತ್ನ ಪಡತಕ್ಕದ್ದೆಂದೂ ಹಾಗೂ ಸಂವಿಧಾನದ ಭಾಗ ix ರಲ್ಲಿ ಭಾಗ ixಬಿ ಅನ್ನು ಹೊಸದಾಗಿ ಸೇರಿಸಿ ಸಹಕಾರ ಸಂಘಗಳ ಆಂತರಿಕ ನಿರ್ವಹಣೆ ಬಗ್ಗೆ ಸ್ಥೂಲ ನಿರ್ದೇಶನ/ಮಾರ್ಗದರ್ಶನಗಳನ್ನು ನೀಡಿ ಅನುಚ್ಛೇದ 243ZI ನಲ್ಲಿ ಯಾವುದೇ ರಾಜ್ಯದ ವಿಧಾನಮಂಡಳವು ಸ್ವಯಿಚ್ಛೆ ರಚನೆ, ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ, ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಭಾಗವಹಿಸುವಿಕೆ ಮತ್ತು ಸ್ವಾಯತ್ತ ಕಾರ್ಯಾಚರಣೆ ತತ್ವಗಳ ಆಧಾರದ ಮೇಲೆ ಸಹಕಾರ ಸಂಘಗಳ ನೋಂದಣಿ, ನಿಯಂತ್ರಣ ಮತ್ತು ಸಮಾಪನೆಗಳಿಗೆ ಸಂಬಂಧಪಟ್ಟ ಸಹಕಾರ ಕಾನೂನನ್ನು ರೂಪಿಸಬೇಕೆಂದು ವಿಧಿಸಲಾಗಿದೆ. ಅನುಚ್ಛೇದ 243ZK ನಲ್ಲಿ ರಾಜ್ಯ ವಿಧಾನಮಂಡಳವು ರೂಪಿಸುವ ಕಾನೂನಿನಲ್ಲಿ ಯಾವುದೇ ಸಹಕಾರ ಸಂಘದ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಭಂದ ಮತದಾರ ಪಟ್ಟಿ ತಯಾರಿಸುವ ಮೇಲುಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣಗಳು ಅದಕ್ಕಾಗಿ ರಚಿಸಲ್ಪಟ್ಟ ಚುನಾವಣಾ ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು ಎಂದು ಉಪಬಂಧಿಸಲಾಗಿದೆ. ಸದರಿ ಸಂವಿಧಾನ ತಿದ್ದುಪಡಿಗಳು ದಿನಾಂಕ 15.02.2012ರಿಂದ ಜಾರಿಗೆ ಬಂದಿದ್ದು ರಾಜ್ಯ ವಿಧಾನಮಂಡಳಗಳು ತಮ್ಮ ಸಹಕಾರ ಕಾನೂನುಗಳಿಗೆ ಅಗತ್ಯ ತಿದ್ದುಪಡಿ ತರಲು ಒಂದು ವರ್ಷ ಕಾಲಾವಧಿಯನ್ನು ನೀಡಿದ್ದು ರಾಜ್ಯ ವಿಧಾನಮಂಡಳಗಳು ಸಹಕಾರ ಕಾನೂನುಗಳಿಗೆ ಅಗತ್ಯ ತಿದ್ದುಪಡಿಗಳನ್ನು ತರಲಿ ಅಥವಾ ಬಿಡಲಿ ಸಂವಿಧಾನ ತಿದ್ದುಪಡಿ ಅಧಿನಿಯಮದ ಉಪಬಂಧಗಳು 15.2.2013ರಿಂದ ಜಾರಿಗೆ ಬಂದಿರುತ್ತವೆ.

ಸಹಕಾರ ಸಂಘ/ಸಹಕಾರಿಯ ಆಡಳಿತ ಮಂಡಲಿಗಳಿಗೆ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಮುಖಾಂತರ ಮುಕ್ತ, ನ್ಯಾಯೋಚಿತ ಹಾಗೂ ಪಾರದರ್ಶಕತೆಯಿಂದ ನಡೆಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ(ತಿದ್ದುಪಡಿ)ಅಧಿನಿಯಮ, 2012ರಂತೆ ಪ್ರಕರಣ 39ಎ ಗೆ ತಿದ್ದುಪಡಿಯನ್ನು (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 3) ತಂದಿರುವುದಲ್ಲದೇ, 2013ರ ಕರ್ನಾಟಕ

–2

ಅಧಿನಿಯಮ ಸಂಖ್ಯೆ:4ರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ(ತಿದ್ದುಪಡಿ) ಆಧಿನಿಯಮ 2012ರಂತೆ ಪ್ರಕರಣ ಸಂಖ್ಯೆ: 26ಕ್ಕೂ ಸಹ ತಿದ್ದುಪಡಿ ತಂದಿದ್ದು, ಪ್ರಕರಣ 26ಎ ಗೆ ಹೊಸದಾಗಿ ಸೇರ್ಪಡೆ ಮಾಡಲಾಗಿದೆ.

ತಿದ್ದುಪಡಿಯಾದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 39ಎ ರಂತೆ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಆಧಿನಿಯಮ 2012ರ ಪ್ರಕರಣ ಸಂಖ್ಯೆ: 26ಕ್ಕೂ 26ಎ ರಂತೆ ಇನ್ನು ಮುಂದೆ ಪ್ರತಿ ಸಹಕಾರ ಸಂಘದ/ಸಹಕಾರಿಯ ಆಡಳಿತ ಮಂಡಲಿಯ ಸಾಮಾನ್ಯ ಚುನಾವಣೆ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರಿ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಚುನಾವಣೆ ನಡೆಸಲು ಬಾಕಿ ಇರುವ ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರ ಸಾಮಾನ್ಯ ಚುನಾವಣೆ, ಪದಾಧಿಕಾರಿಗಳ ಚುನಾವಣೆ ಮತ್ತು ಆಕಸ್ಮಿಕ ಖಾಲಿಬಿದ್ದ ಸ್ಥಾನಕ್ಕೆ ಚುನಾವಣೆಯನ್ನು ಸೆಪ್ಟೆಂಬರ್ 2013 ರಿಂದ ಆರಂಭಿಸಿ ಡಿಸೆಂಬರ್ 2013ರೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಹಕಾರ ಚುನಾವಣಾ ಆಯೋಗವು ಸಹಕಾರ ಸಂಘಗಳ/ಸಹಕಾರಿಯ ಆಡಳಿತ ಮಂಡಲಿ/ಪದಾಧಿಕಾರಿ ಚುನಾವಣೆ, ಹೊಸದಾಗಿ ನೋಂದಣಿಯಾದ/ಆಡಳಿತ ಮಂಡಲಿ ರದ್ದಾಗಿರುವ ಸಂಘ/ಬ್ಯಾಂಕುಗಳಿಗೆ/ಸಹಕಾರಿಗೆ ಚುನಾವಣೆ ಬಗ್ಗೆ ಮತ್ತು ಮತದಾರರ ಪಟ್ಟಿ ಸಿದ್ದಪಡಿಸುವ ಕುರಿತು ಕೆಲವು ಮಾರ್ಗದರ್ಶನಗಳನ್ನು ಈಗಾಗಲೇ ಉಲ್ಲೇಖಿತ ಪತ್ರಗಳಲ್ಲಿ ನೀಡಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ಕ್ಕೆ ಸೂಕ್ತ ತಿದ್ದುಪಡಿಗಳನ್ನು ಪ್ರಸ್ತಾಪಿಸಿ ಕರಡು ನಿಯಮಗಳನ್ನು ದಿನಾಂಕ 28.04.2013ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಅವುಗಳ ಮೇಲೆ ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ 5.6.2013ರವರೆಗೆ ಕಾಲಾವಕಾಶ ನೀಡಲಾಗಿತ್ತು. ಸದರಿ ನಿಯಮಗಳನ್ನು ಇನ್ನೂ ಅಂತಿಮಗೊಳಿಸಿರುವುದಿಲ್ಲ. ರಾಜ್ಯದಲ್ಲಿ ಜಾರಿಯಲ್ಲಿರುವ ಇನ್ನೊಂದು ಸಹಕಾರ ಕಾಯ್ದೆಯಾದ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ಕ್ಕೂ ಕರ್ನಾಟಕ ಅಧಿನಿಯಮ ಸಂಖ್ಯೆ 04/2013ರನ್ವಯ ತಿದ್ದುಪಡಿ ಮಾಡಿದ್ದು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2012ರ ಉಪಬಂಧಗಳು ದಿನಾಂಕ 11.2.2013ರಿಂದ ಜಾರಿಗೆ ಬಂದಿದ್ದು ಅದರಡಿ ಕರಡು ನಿಯಮಗಳನ್ನು ದಿನಾಂಕ 28.5.2013ರ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು ದಿನಾಂಕ 28.06.2013ರವರೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶವಿರುತ್ತದೆ. ಎರಡೂ ಕಾಯ್ದೆಯಡಿ ರಚಿಸಬೇಕಾದ ನಿಯಮಗಳು ರಚಿತವಾಗಿ ಇನ್ನೂ ಜಾರಿಯಲ್ಲಿ ಬಂದಿರುವುದಿಲ್ಲ.

ಇದಲ್ಲದೇ, ಸಹಕಾರ ಚುನಾವಣಾ ಆಯೋಗವು ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರ ಸಾಮಾನ್ಯ ಚುನಾವಣೆ, ಪದಾಧಿಕಾರಿಗಳ ಚುನಾವಣೆ ಮತ್ತು ಆಕಸ್ಮಿಕ ಖಾಲಿಬಿದ್ದ ಸ್ಥಾನ ಹಾಗೂ ಹೊಸದಾಗಿ ನೋಂದಣಿಯಾದ ಸಹಕಾರ ಸಂಘ/ಸೌಹಾರ್ದ ಸಹಕಾರಿಗಳಿಗೆ ಚುನಾವಣೆಯನ್ನು ನಾಲ್ಕು ಹಂತಗಳಲ್ಲಿ ಅಂದರೆ ಸೆಪ್ಟೆಂಬರ್ 2013 ರಿಂದ ಆರಂಭಿಸಿ ಡಿಸೆಂಬರ್ 2013ರೊಳಗೆ ನಡೆಸಲು ರಿಟರ್ನಿಂಗ್ ಆಫೀಸರ್ ನೇಮಿಸಿದ ನಂತರ ಮೇಲ್ವಿಚಾರಣೆ ಮಾಡಬೇಕಾಗಿರುತ್ತದೆ. ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಈ ಮೇಲ್ವಿಚಾರಣೆಯ ಹೊಣೆಯನ್ನು ಸಹ ನೀಡಲು ಆಯೋಗವು ನಿರ್ಧರಿಸಿರುತ್ತದೆ. ಎರಡೂ ಕಾಯ್ದೆಯಡಿ ರಚಿಸಬೇಕಾದ ನಿಯಮಗಳು ರಚಿತವಾಗಿ ಇನ್ನೂ ಜಾರಿಯಲ್ಲಿ ಬಾರದಿರುವುದರಿಂದ ಆಯೋಗವು ಜಿಲ್ಲಾ ಚುನಾವಣಾಧಿಕಾರಿಯನ್ನು ನೇಮಿಸಿ ಅವರಿಗೆ ಕರ್ತವ್ಯಗಳನ್ನು ವಹಿಸಿಕೊಡಲು ಮತ್ತು ರಿಟರ್ನಿಂಗ್ ಆಫೀಸರ್ ನೇಮಕಾತಿ ಮಾಡಬೇಕಾಗಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ.

## ಆದೇಶ

**ಸಂಖ್ಯೆ: ಸಚುಆ/ 16 /2013-14** **ದಿನಾಂಕ: 03.07.2013**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಸಹಕಾರ ಸಂಘಗಳ/ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಸಲ್ಲಿಸಿದ ಮತದಾರರ ಪಟ್ಟಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲಿಸಿ

-3

ಚುನಾವಣಾ ಆಯೋಗ ಬೆಂಗಳೂರು

ಸಿದ್ಧಪಡಿಸಲು ಮತ್ತು ಚುನಾವಣಾ ಆಯೋಗದ ಪರವಾಗಿ ಜಿಲ್ಲೆಯಲ್ಲಿನ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯನ್ನು ಸಮರ್ಪಕವಾಗಿ ನಡೆಸಲು ಶ್ರೀ ಎನ್.ಸಿ. ಮುನಿಯಪ್ಪ, ಆಯುಕ್ತರು, ಸಹಕಾರ ಚುನಾವಣಾ ಆಯೋಗ, ಬೆಂಗಳೂರು ಆದ ನಾನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(1) ಮತ್ತು 39ಎಎ(2) ಅಡಿಯಲ್ಲಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26ಎ ಅಡಿಯಲ್ಲಿ ಅಂತರ್ಗತವಾದ(inherent) ಅಧಿಕಾರವನ್ನು ಚಲಾಯಿಸಿ ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಚುನಾವಣಾಧಿಕಾರಿಯನ್ನಾಗಿ ಮುಂದಿನ ಆದೇಶದವರೆಗೆ ನೇಮಿಸಿರುತ್ತೇನೆ ಮತ್ತು ಈ ಜಿಲ್ಲಾ ಚುನಾವಣಾಧಿಕಾರಿಗಳು ಸಹಾಯಕ ಚುನಾವಣಾಧಿಕಾರಿಗಳ ನೆರವಿನೊಂದಿಗೆ **ಅನುಬಂಧದಲ್ಲಿ** ಸೂಚಿಸಿರುವ ನಿರ್ದೇಶನ ಮತ್ತು ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಲು ಆದೇಶಿಸಿದೆ.

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು

**ಇವರಿಗೆ :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01
2. ಸಹಕಾರ ಸಂಘಗಳ ನಿಬಂಧಕರು, #1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052.
3. ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ), (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು-52
4. ಸಹಕಾರ ಸಂಘಗಳ ಜಂಟಿ ನಿಬಂಧಕರು(ಆಡಳಿತ ಮತ್ತು ಅಭಿವೃದ್ಧಿ), (ಪಟ್ಟಣ ಬ್ಯಾಂಕುಗಳ ವಿಭಾಗ), (ಐಸಿಡಿಪಿ), (ಕಾನೂನು ಕೋಶ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು-52
5. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,
6. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು,
7. ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು,
8. ವ್ಯವಸ್ಥಾಪಕ ನಿರ್ದೇಶಕರು, ಕೆ. ಎಂ. ಎಫ್., ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿ., ಚಾಮರಾಜಪೇಟೆ, ಬೆಂಗಳೂರು.
14. ವ್ಯವಸ್ಥಾಪಕ ನಿರ್ದೇಶಕರು, ಹಾಪ್‌ಕಾಮ್ಸ್, ಬೆಂಗಳೂರು.
15. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.
16. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು-27.
17. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ವಸತಿ ಮಹಾಮಂಡಳ ನಿ., ಟಿ. ಕರಿಯಪ್ಪ ರಸ್ತೆ, ಬೆಂಗಳೂರು.
18. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಪತ್ತಿನ ಸಹಕಾರ ಸಂಘ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು.

# ಕರ್ನಾಟಕ ಸರ್ಕಾರ
# ಸಹಕಾರ ಚುನಾವಣಾ ಆಯೋಗ

# ಅನುಬಂಧ

| ಸಂಖ್ಯೆ: ಸಚುಆ/ಚುಅ/ 16 /2013-14 | ದಿನಾಂಕ: 03.07.2013 |
|---|---|

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012 ರ ಪ್ರಕಣ 39ಎ(1) ಮತ್ತು ಪ್ರಕರಣ ಸಂಖ್ಯೆ 39ಎಎ(2) ರ ರೀತ್ಯಾ ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ ನಡೆಯುವ ಎಲ್ಲಾ ಆಡಳಿತ ಮಂಡಳಿ/ಪದಾಧಿಕಾರಿಗಳ ಚುನಾವಣೆಯ ಸಂಬಂಧ ಮತದಾರರ ಪಟ್ಟಿಗಳನ್ನು ತಯಾರಿಸುವ ಮತ್ತು ಚುನಾವಣೆಗಳನ್ನು ನಡೆಸುವ ಕಾರ್ಯದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದಾಗಿದೆ. ಅಧಿನಿಯಮ ಪ್ರಕರಣ 39ಎ(2)(ಎ) ದ ಅವಕಾಶದಂತೆ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಚುನಾವಣೆ ನಡೆಸತಕ್ಕದ್ದಾಗಿದೆ. ಅಧಿನಿಯಮ ಪ್ರಕರಣ 39ಎ(3)(i) ರೀತ್ಯಾ ಪ್ರಾಥಮಿಕ ಸಹಕಾರ ಸಂಘಗಳಿಗೆ ಚುನಾವಣೆಯನ್ನು 30 ನೇ ಸೆಪ್ಟೆಂಬರ್ 2013 ರ ಒಳಗೆ ನಡೆಸಬೇಕಾಗಿದ್ದು, ಚುನಾವಣಾ ಆಯೋಗವು ಈಗಾಗಲೇ ವಿವಿಧ ದಿನಾಂಕಗಳನ್ನು ನಿಗದಿಪಡಿಸಿದ್ದು, ಅಧಿಸೂಚನೆ ಹೊರಡಿಸಿರುತ್ತದೆ. ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಚುನಾವಣೆ ನಡೆಸಬೇಕಾಗಿದ್ದು, ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವ/ಪರಿಶೀಲಿಸುವ ಸಂಬಂಧ ಆಯೋಗವು ಉಲ್ಲೇಖಿತ ಅಧಿಸೂಚನೆಯಲ್ಲಿ ವಿವಿಧ ಅಂಶಗಳ ಕುರಿತು ಸೂಚನೆಗಳನ್ನು ಈಗಾಗಲೇ ನೀಡಿದೆ. ಸದಸ್ಯರ ಮತ ಕುರಿತಂತೆ ಅಧಿನಿಯಮ ಪ್ರಕರಣ (20) ರಲ್ಲಿ ವಿವರಿಸಲಾಗಿದೆ. ಅಧಿನಿಯಮ 20(2) ರ ರೀತ್ಯಾ ಈ ಕೆಳಕಂಡ ವ್ಯಕ್ತಿಗಳು ತಾವು ಸದಸ್ಯರಾಗಿರುವ ಸಹಕಾರ ಸಂಘದ ಸಭೆಯಲ್ಲಿ ಮತ ಚಲಾಯಿಸಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

(1) ನಾಮಮಾತ್ರ ಅಥವಾ ಸಹ ಸದಸ್ಯ (Nominal or Associate Member)

(2) ಸಂಘದ ಮಹಾಸಭೆಗೆ ಮುಂಚಿತವಾಗಿ 12 ತಿಂಗಳ ಒಳಗೆ ಸಂಘದ ಸದಸ್ಯನಾಗಿರುವ ಒಬ್ಬ ವ್ಯಕ್ತಿ

(3) ಸುಸ್ತಿ ಬಾಕಿದಾರನಾಗಿರುವ ಒಬ್ಬ ಸದಸ್ಯನು ಸಾಲಗಾರನಾಗಿ ಬಾಕಿಯನ್ನು ಅವನು ತನಗೆ 15 ದಿನಗಳಿಗೆ ಕಡಿಮೆ ಇಲ್ಲದಂತೆ ನೋಟೀಸನ್ನು ಕೊಟ್ಟ ನಂತರ ಮಹಾಸಭೆಯ ದಿನಾಂಕಕ್ಕೆ ಕನಿಷ್ಟ 15 ದಿನಗಳ ಮುಂಚಿತವಾಗಿ ಅವನು ತನ್ನಿಂದ ಬಾಕಿ ಇರುವ ಯಾವುದೇ ಬಗೆಯ ಬಾಕಿಗಳನ್ನು ಪಾವತಿ ಮಾಡಲು ತಪ್ಪಿದರೆ ಅಂತಹ ಸದಸ್ಯನನ್ನು ಸುಸ್ತಿಬಾಕಿದಾರನೆಂದು ಭಾವಿಸತಕ್ಕದ್ದು. ಈ ಕ್ರಮ ಅನುಸರಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸುವುದು.

(4) ಸಹಕಾರ ಸಂಘಗಳ ಅಧಿನಿಯಮಕ್ಕೆ ಇತ್ತೀಚೆಗೆ ಆದ ತಿದ್ದುಪಡಿಯನ್ವಯ ಕಳೆದ 5 ಮಹಾಸಭೆಗಳಲ್ಲಿ 3 ಮಹಾಸಭೆಗಳಿಗೆ ಹಾಜರಾಗಲು ವಿಫಲರಾದ ಸದಸ್ಯ/ಪ್ರತಿನಿಧಿಗೆ ಮತದಾನದ ಹಕ್ಕು ಇರುವುದಿಲ್ಲವೆಂದು ಈ ಹಿಂದೆ ತಿಳಿಸಲಾಗಿತ್ತು. ಆದರೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಕ್ಕೆ 2012ರಲ್ಲಿ ಮಾಡಲಾದ ತಿದ್ದುಪಡಿಯು ದಿನಾಂಕ:11-2-2013 ರಿಂದ ಜಾರಿಗೆ ಬಂದಿರುವ ಹಿನ್ನೆಲೆಯಲ್ಲಿ ಈ ಅಂಶವನ್ನು ಪ್ರಸ್ತುತ ಗಣನೆಗೆ ತೆಗೆದುಕೊಳ್ಳುವ ಅಗತ್ಯ ಇರುವುದಿಲ್ಲ.

ಸಹಕಾರ ಚುನಾವಣಾ ಆಯೋಗ

-2

(5) ಕಳೆದ 3 ಸಹಕಾರಿ ವರ್ಷಗಳಿಂದ ಸಂಘದಿಂದ ಉಪನಿಯಮದಲ್ಲಿ ಗೊತ್ತುಪಡಿಸಿದಂತೆ ಯಾವುದೇ ಕನಿಷ್ಟ ಸೇವೆ ಅಥವಾ ಸೌಲಭ್ಯಗಳನ್ನು ಪಡೆಯಲು ವಿಫಲನಾದ ಸದಸ್ಯನಿಗೂ ಈ ಹಿಂದೆ ತಿಳಿಸಲಾಗಿತ್ತು. ಆದರೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಕ್ಕೆ 2012ರಲ್ಲಿ ಮಾಡಲಾದ ತಿದ್ದುಪಡಿಯು ದಿನಾಂಕ:11-2-2013 ರಿಂದ ಜಾರಿಗೆ ಬಂದಿರುವ ಹಿನ್ನೆಲೆಯಲ್ಲಿ ಈ ಅಂಶವನ್ನು ಪ್ರಸ್ತುತ ಗಣನೆಗೆ ತೆಗೆದುಕೊಳ್ಳುವ ಅಗತ್ಯ ಇರುವುದಿಲ್ಲ.

(6) ಸಂಘದ ಸದಸ್ಯ ಮೃತಪಟ್ಟಿರುವಿಕೆ, ಸದಸ್ಯರು ಸಂಘದ ಕಾರ್ಯಕ್ಷೇತ್ರದಿಂದ ಸದಸ್ಯನು ಖಾಯಂ ಆಗಿ ಬಿಟ್ಟುಹೋಗಿದ್ದಲ್ಲಿ, ಸಂಘದಿಂದ ನಿಯಮಾನುಸಾರ ಸದಸ್ಯತ್ವ ವಜಾ ಆಗಿರುವಿಕೆ, ಸದಸ್ಯ ತನ್ನ ಷೇರುಹಣವನ್ನು ಸಮಿತಿಯ ಒಪ್ಪಿಗೆ ಮೇರೆಗೆ ಮತ್ತೊಬ್ಬ ಸದಸ್ಯನಿಗೆ ವರ್ಗಾಯಿಸಿರುವ ಪ್ರಕರಣಗಳು, ಇತ್ಯಾದಿ ಪ್ರಕರಣಗಳಲ್ಲಿ ಸದಸ್ಯತ್ವವನ್ನೇ ಕಳೆದುಕೊಳ್ಳುವುದರಿಂದ ಮತದಾರರ ಪಟ್ಟಿ ಸಿದ್ಧಪಡಿಸುವ ಸಂದರ್ಭದಲ್ಲಿ ಈ ಅಂಶಗಳ ಕಡೆಗೆ ಗಮನಹರಿಸತಕ್ಕದ್ದು.

(7) ಸಂಘದ ಸದಸ್ಯತ್ವವು ಅಧಿನಿಯಮ ಪ್ರಕರಣ 17 ರ ಮೇರೆಗೆ ರದ್ದುಗೊಂಡಿದ್ದಲ್ಲಿ ಅಂತಹ ಪ್ರಕರಣಗಳ ಬಗ್ಗೆ ಪರಿಶೀಲಿಸತಕ್ಕದ್ದು.

(8) ಸಂಘದ ಆಡಳಿತ ಮಂಡಳಿಗೆ ಸಂಘದ ಉಪನಿಯಮಗಳ ಅವಕಾಶದಂತೆ ವಿವಿಧ ಕ್ಷೇತ್ರವಾರು ನಿರ್ದೇಶಕರನ್ನು ಚುನಾಯಿಸಬೇಕಾಗಿದ್ದಲ್ಲಿ, ಕ್ಷೇತ್ರವಾರು ಮತದಾರರ ಪಟ್ಟಿಯನ್ನು ಸಿದ್ಧಪಡಿಸಬೇಕಾಗುತ್ತದೆ.

(9) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 13 ರೀತ್ಯಾ ಸಂಘದ ಮುಖ್ಯಕಾರ್ಯನಿರ್ವಾಹಕನು ಸಂಘದ ಪ್ರತಿಯೊಬ್ಬ ಸದಸ್ಯನಿಗೆ, ಸಂಘದ ಹೆಸರು, ಸದಸ್ಯರ ಪೂರ್ಣ ಹೆಸರು, ಸದಸ್ಯತ್ವ ಸಂಖ್ಯೆ, ವಯಸ್ಸು ಮತ್ತು ಸದಸ್ಯನ ವಾಸಸ್ಥಾನದ ವಿಳಾಸವನ್ನು ಸೂಚಿಸುವ ಗುರುತಿನ ಚೀಟಿಯನ್ನು ನೀಡತಕ್ಕದ್ದಾಗಿದೆ. ಸಂಘದ ಸದಸ್ಯನು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಿದ ಗುರುತಿನ ಚೀಟಿಯ ಮೇಲೆ ಮುಖ್ಯಕಾರ್ಯನಿರ್ವಾಹಕನು ಸಂಘದ ಮುದ್ರೆಯೊಂದಿಗೆ ಮತ್ತು ಸದಸ್ಯನು ಸಹಿ ಮಾಡಿದ್ದನ್ನು ಚೀಟಿಯ ಮೇಲೆ ದೃಢೀಕರಿಸತಕ್ಕದ್ದು. ಈ ಬಗ್ಗೆ ಪರಿಶೀಲಿಸುವುದು.

ಸಹಕಾರ ಚುನಾವಣಾ ಆಯೋಗ
ಆಯುಕ್ತರು
ಬೆಂಗಳೂರು

(10) ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಸದಸ್ಯರ ಚುನಾವಣೆ ನಡೆಯುವ ನಿಕಟಪೂರ್ವ ವರ್ಷದಲ್ಲಿ ಸಂಘಕ್ಕೆ 180 ದಿನಗಳು ಹಾಲು ಸರಬರಾಜು/ಮಾರಾಟ ಮಾಡಿದ ಸದಸ್ಯರು ಮಾತ್ರ ಚುನಾವಣೆಯಲ್ಲಿ ಮತ ಚಲಾಯಿಸಲು/ಸ್ಪರ್ಧಿಸಲು ಅರ್ಹತೆ ಗಳಿಸುತ್ತಾರೆ. ಈ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ.

(11) ರಾಜ್ಯ ಉಚ್ಚ ನ್ಯಾಯಾಲಯ ಅಥವಾ ಇತರೆ ಯಾವುದೇ ನ್ಯಾಯಾಲಯದ ಆದೇಶದಂತೆ ಯಾವುದೇ ವ್ಯಕ್ತಿಯ ಸದಸ್ಯತ್ವ ರದ್ದಾಗಿದ್ದಲ್ಲಿ, ಅಂತಹ ಪ್ರಕರಣಗಳ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಿಡುವುದು.

(12) ಮತದಾರರ ಪಟ್ಟಿಯ ಸಿದ್ಧಪಡಿಸುವಿಕೆ ವಿಷಯವಾಗಿ ಪರಿಣಾಮಕಾರಿಯಾಗಿ ಪರಿಶೀಲನಾ ಕಾರ್ಯನಿರ್ವಹಿಸಲು ಅಧಿಕಾರಿಗಳನ್ನು ನಿಯೋಜಿಸುವುದು ಮತ್ತು ಮತದಾರರ ಪಟ್ಟಿ ಪರಿಶೀಲನೆ ಬಗ್ಗೆ ಮೇಲ್ವಿಚಾರಣೆ ನಡೆಸಲು ಇಲಾಖಾ/ನೌಕರರ/ಹಾಲು ಒಕ್ಕೂಟದ ಹಿರಿಯ ಅಧಿಕಾರಿಗಳನ್ನೊಳಗೊಂಡ ಮೇಲ್ವಿಚಾರಣಾ ತಂಡವನ್ನು ರಚಿಸಬಹುದಾಗಿದೆ.

-3

(13) ಪ್ರತಿ ಸಂಘವು ಸುಸ್ತಿದಾರರ ಪಟ್ಟಿ, ಕರಡು ಮತದಾರರ ಪಟ್ಟಿಯನ್ನು ಸಂಘದ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಿ, ಈ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನಿಗದಿತ ಅವಧಿಯೊಳಗೆ ಸಲ್ಲಿಸುವಂತೆ ಸೂಚಿಸಿ ಆ ನಂತರ ಪರಿಶೀಲಿಸಿ ಅಂತಿಮಗೊಳಿಸಬೇಕಾಗುತ್ತದೆ.

ಆಡಳಿತ ಮಂಡಳಿ ಚುನಾವಣೆ ನಡೆಸಲು ಸಹಕಾರ ಸಂಘಗಳು, ಅರ್ಹ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದು ಅತ್ಯಂತ ಮಹತ್ವದ ಕೆಲಸವಾಗಿದ್ದು, ಈ ಬಗ್ಗೆ ಇಲಾಖಾಧಿಕಾರಿಗಳು ಹೆಚ್ಚಿನ ಶ್ರದ್ಧೆ ವಹಿಸಿ ಕಾರ್ಯಪ್ರವೃತ್ತರಾಗುವಂತೆ ಸೂಚಿಸಿದೆ. ಈ ಹಂತದಲ್ಲಿ ಲೋಪಗಳು ಸಂಭವಿಸಿದಲ್ಲಿ ಇಡೀ ಚುನಾವಣೆಯ ಮೇಲೆ ಪರಿಣಾಮ ಬೀರುವುದರಿಂದ, ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸುವಂತೆ ಸೂಚಿಸಿದೆ.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**